‘ನಾನು ಬೇಡಿಕೊಳ್ಳುತ್ತೇನೆ ಮಾನ್ಯರೇ, ನಾನು ನನ್ನ ಪ್ರಾಮಾಣಿಕವಾದ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ’ ಎಂದು ಹಗಿ ತೊದಲಿದನು. ಆ ವೃದ್ಧ ಸಭ್ಯಸ್ಥರು ನಸುನಗುತ್ತಾ ‘ಬ್ಯಾರನ್ ಅವರು ನನಗೆ ಈ ಲಕೋಟೆಯನ್ನು ತಲುಪಿಸುವ ಕೆಲಸ ನೀಡಿದ್ದಾರೆ’ ಎಂದು ಹೇಳುತ್ತಾ ಒಂದು ಲಕೋಟೆಯನ್ನು ಹಗಿ ಕೈಗಿತ್ತರು.

ಲಕೋಟೆಯ ಮೇಲೆ ಈ ರೀತಿ ಬರೆಯಲಾಗಿತ್ತು, ‘ಹಗಿ ಎರ್ಸ್‌ಕೈನ್ ಹಾಗೂ ಲಾರಾ ಮರ್ಟನ್ ಅವರಿಗೆ ಮದುವೆಯ ಕಾಣಿಕೆ. ಮುದುಕ ಭಿಕ್ಷುಕನಿಂದ’ ಲಕೋಟೆಯ ಒಳಗೆ 10,000 ಪೌಂಡ್‌ನ ಚೆಕ್ ಇತ್ತು.

ಅವರಿಬ್ಬರೂ ಮದುವೆಯಾದಾಗ, ಅಲನ್ ಟ್ರೆವರ್ ಆ ಸಮಾರಂಭದಲ್ಲಿದ್ದ ಮುಖ್ಯ ವ್ಯಕ್ತಿಯಾಗಿದ್ದನು ಹಾಗೂ ಬ್ಯಾರನ್ ಅವರು ಮದುವೆಯ ಊಟದ ವೇಳೆ ಒಂದು ಭಾಷಣ ಮಾಡಿದರು.

ಅಲನ್ ಟ್ರೆವರ್ ಇದರ ಬಗ್ಗೆ ಪ್ರತಿಕ್ರಿಯಿಸುತ್ತಾ ‘ಲಕ್ಷಾಧಿಪತಿಗಳಾದ ಮಾಡೆಲ್‌ಗಳೇ ವಿರಳ; ಆದರೆ ಸಂತೋಷವೆಂದರೆ ಮಾಡೆಲ್ ಲಕ್ಷಾಧಿಪತಿಗಳಂತೂ ವಿರಳರಲ್ಲಿ ವಿರಳ’ ಎಂದು ಹೇಳಿದನು.

## ಆಸ್ಕರ್ ವೈಲ್ಡ್

ಈ ಐರಿಷ್ ಭಾಷೆಯ ನಾಟಕಕಾರ, ಕವಿ, ಸಣ್ಣಕತೆ, ಕಾದಂಬರಿಗಳ ಲೇಖಕ ಹುಟ್ಟಿದ್ದು ಐರ್‌ಲೆಂಡ್‌ನ ಡಬ್ಲಿನ್‌ನಲ್ಲಿ. ಕಳೆದ ವಿಕ್ಟೋರಿಯನ್ ಯುಗದಲ್ಲಿ ಲಂಡನ್ ನಗರದಲ್ಲಿ ಅತ್ಯಂತ ಸಫಲ ನಾಟಕಕಾರರಲ್ಲಿ ಇವನ ಹೆಸರನ್ನು ಹೇಳಬಹುದು. ‘ದಿ ಇಂಪಾರ್ಟನ್ಸ್ ಆಫ್ ಬೀಯಿಂಗ್ ಅರ್ನೆಸ್ಟ್’ ಎಂಬ ಇವನ ನಾಟಕವಂತೂ ಆ ದಿನಗಳಲ್ಲಿ ಅಗಾಧ ಖ್ಯಾತಿ ಪಡೆದುಕೊಂಡಿತ್ತು.

ಆತನ ಬರವಣಿಗೆಯ ವ್ಯಾಪ್ತಿ ವಿಮರ್ಶೆ, ಕಾವ್ಯ, ಮಕ್ಕಳ ಕತೆಗಳು, ಅಸಂಖ್ಯಾತ ಉಪನ್ಯಾಸ, ಪರಾಮರ್ಶೆ ಹಾಗೂ ಪತ್ರಿಕೋದ್ಯಮವನ್ನೂ ಒಳಗೊಂಡಿದೆ. ‘ದಿ ಡಿಕೇ ಆಫ್ ಲೈಯಿಂಗ್’, ‘ಪೆನ್ ಪೆನ್ಸಿಲ್ ಅಂಡ್ ಪಾಯ್ಸನ್’, ‘ದಿ ಟ್ರುಕ್ ಆಫ್ ಮಾಸ್ಕ್’ ಮುಂತಾದ ಕೃತಿಗಳನ್ನು ಆತ ಬರೆದಿದ್ದಾನೆ.

## ಟಿ.ಎಸ್. ರಘುನಾಥ್

ಕನ್ನಡ ಪ್ರಾಧ್ಯಪಕರಾಗಿ ಕೆಲಸ ಮಾಡಿರುವ ಇವರು ನಲವತ್ತು ವರ್ಷಗಳ ಕಾಲ ಬೋಧನೆಯ ಅನುಭವ ಹೊಂದಿದ್ದಾರೆ. ಸಂಸ್ಕೃತಿ ಅಧ್ಯಯನ ಇವರ ಆಸಕ್ತಿಯ ಕ್ಷೇತ್ರ. ಟಾಲ್‌ಸ್ಟಾಯ್, ಡಿ.ಎಚ್. ಲಾರೆನ್ಸ್, ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಕತೆಗಳ ಬಗ್ಗೆ